ಇದ್ದಕ್ಕಿದ್ದಂತೆ ಜೋಳಿಗೆ ಎಂಬ ಪದ ಕಾಡಲು ಶುರು ಮಾಡಿದೆ. ಈ ಮಾತು ತಮಾಷೆ ಅನ್ನಿಸಬಹುದು. ಎಲ್ಲಾ ಬಿಟ್ಟು ಯಃಕಶ್ಚಿತ್ ಜೋಳಿಗೆ ಎಂಬ ಪದದಲ್ಲೇನು ಮಹಾ ವಿಶೇಷ ಅಂದೀರಾ? ಹೌದು, ನನಗೂ ಅದೇ ಆಶ್ಚರ್ಯ. ಜೋಳಿಗೆ, ಸರ್ವೇ ಸಾಮಾನ್ಯವಾದ ಬಗಲುಚೀಲ. ಗಾತ್ರ, ಸಾಮರ್ಥ್ಯಕ್ಕೆ ತಕ್ಕಂತೆ ಯಾವುದೇ ರೀತಿಯ ಸಾಮಾನು ಸರಂಜಾಮುಗಳನ್ನು ಕೊಂಡೊಯ್ಯಲು ಸಹಾಯಕವಾಗುವುದು. ಆದರೆ ಈ ಬಗಲುಚೀಲ ಕೆಲವು ಹಿನ್ನೆಲೆಗಳಲ್ಲಿ ಕುತೂಹಲ ಹುಟ್ಟಿಸುವುದು ನಿಜ. ಚಿಕ್ಕಂದಿನಿಂದಲೂ ಈ ಜೋಳಿಗೆ ಹಲವು ಸನ್ನಿವೇಶಗಳೊಂದಿಗೆ ನಮ್ಮ ಕಣ್ಣ ಮುಂದೆ ಬರುತ್ತಿತ್ತು. ಮುಂದೆ ನಮಗರಿವಿಲ್ಲದೆಯೇ ಆತ್ಮೀಯವಾಗಿ ನಮ್ಮೊಂದಿಗೆ ಬೆರೆತು ಹೋಯಿತು. ಏಕೆಂದರೆ ಈ ಪದದ ಪರಿಕಲ್ಪನೆಯೇ ವಿಶಾಲವಾದುದು. ಜೋಳಿಗೆಯ ನೆನಪುಗಳು ಮರುಕಳಿಸುತ್ತಿವೆ ಈಗ.

ಅಜ್ಜನ ಜೋಳಿಗೆಗೆ ಜಿಪ್ ಇರಲಿಲ್ಲ. ಎಲ್ಲಿ ಹೋಗುವಾಗಲೂ ಅವರ ಹೆಗಲಿಗೆ ಆ ಜೋಳಿಗೆ ಇರಲೇ ಬೇಕು. ಇಲ್ಲೇ ಪೇಟೆಗೆ ಹೋಗಿ ಬರುವೆನೆಂದು ಹೊರಟವರು ಅಲ್ಲಿರುವ ಮೂರೋ ನಾಲ್ಕೋ ಅಂಗಡಿಗಳಲ್ಲಿ ಮನೆಗೆ ಬೇಕಾಗುವ ಸಣ್ಣಪುಟ್ಟ ಸಾಮಾನುಗಳನ್ನು ಖರೀದಿಸಿ, ಸಿಕ್ಕ ಸ್ನೇಹಿತರೊಡನೆ ಸಣ್ಣ ಹರಟೆ ಹೊಡೆದು ಬರುವವರು. ಅಜ್ಜನ ಜೋಳಿಗೆಯೆಂದರೆ ನಮಗೆಲ್ಲ ಬಲು ಇಷ್ಟ. ಯಾಕೆಂದರೆ ಕಡಲೆ ಮಿಠಾಯಿಯನ್ನು ಹೊತ್ತು ತರುವ ಜೋಳಿಗೆಯದು. ದೂರದಲ್ಲಿ ಬರುತ್ತಿರುವಾಗಲೇ ಓಡಿ ಹೋಗಿ ಅವರ ಹೆಗಲಿನ ಭಾರವನ್ನು ಇಳಿಸುವ ನೆವದಲ್ಲಿ ಅದನ್ನು ನಮ್ಮ ಹೆಗಲಿಗೆ ಇಳಿಸಿಕೊಳ್ಳುತ್ತಿದ್ದೆವು. ಅದರ ತುದಿಗೆ ಇರುವ ನೂಲಿನ ಕುಚ್ಚು, ದಾರಿಯನ್ನು ಗುಡಿಸಿಕೊಂಡು ಬರುತ್ತಿತ್ತು. ಅಜ್ಜ ನೋಡಿ ಅದನ್ನು ನಮ್ಮ ಅಳತೆಗೆ ತಕ್ಕಂತೆ ಗಂಟು ಹಾಕಿ ಭುಜಕ್ಕೆ ಏರಿಸಿ ಕೊಡುವಾಗ ಎಲ್ಲಿಲ್ಲದ ಸಂತೋಷ. ಮನೆಗೆ ಬಂದು ನಿಲ್ಲುತ್ತಿರುವಾಗಲೇ ಪರವಾನಿಗೆ ಇಲ್ಲದೆ ಜಪ್ತಿ ಮಾಡುತ್ತಿದ್ದೆವು. ಆತ್ಮೀಯತೆಯೊಂದಿಗೆ ಹಂಚಿ ತಿನ್ನುವ ಜೋಳಿಗೆಯಾಗಿತ್ತು ಅದು.

ನಮ್ಮೂರಿಗೆ ಬರುವ ದಾಸಯ್ಯನವರ ಜೋಳಿಗೆ ಇನ್ನೊಂದು ಬಗೆಯದು. ದೂರದಲ್ಲಿ ದಾಸಯ್ಯ ಬರುತ್ತಿರುವಾಗಲೇ ಚಪ್ಪಾಳೆ ತಟ್ಟಿ ನಮ್ಮ ಹಾಡು. 'ದಾಸಯ್ಯ ಬಂದ ನಮ್ಮನೆಗೆ, ಜೋಳಿಗೆ ಹಿಡಿದು ಬಾಗಿಲಿಗೆ; ಬಿಳಿಯ ಪಂಚೆ ಉಟ್ಟಿದ್ದ ಚಂದದ ನಾಮವ ಹಾಕಿದ್ದ; ಬಂಬಂ ಶಂಖವ ಊದಿದ್ದ, ಡಣ ಡಣ ಜಾಗಟೆ ಬಾರಿಸಿದ.' ಅದರಲ್ಲೇನು ಇರಬಹುದು! ಕೇಳುವ ಧೈರ್ಯವಿರಲಿಲ್ಲ ಆಗ; ಹಟ ಮಾಡಿದರೆ ದಾಸಯ್ಯನವರು ಜೋಳಿಗೆಯಲ್ಲಿ ತುಂಬಿಸಿಕೊಂಡು ಹೋಗುತ್ತಾರೆ ಎಂದು ತಾಳ್ಮೆ ಕಳೆದುಕೊಳ್ಳುವ ತಾಯಂದಿರು

